ಮುತ್ತಿಗೆ ಹಾಕುತ್ತೇವೆ. ನಮ್ಮ ಪ್ರತಿಭಟನೆ ಶಾಂತಿಯುತವಾಗಿರುತ್ತೆ. ಏನಾದರೂ ಆದರೆ ಅದಕ್ಕೆ ನೀವೇ ಹೊಣೆ ಅಂತ ಎಚ್ಚರಿಸಿದ್ದರು. ಡಿಸಿ ಸಾಹೇಬರನ್ನು ಭೇಟಿಯಾಗಿ ಅರ್ಜಿಯನ್ನು ಅವರ ಕೈಗೇ ಕೊಟ್ಟುಬರಲು ಮೂವತ್ತು ಜನರ ನಿಯೋಗ ದುರ್ಗಕ್ಕೆ ಹೋಯಿತು. ಸಾಹೇಬರು ಕಚೇರಿಯಲ್ಲಿ ಇರಲಿಲ್ಲ. ಬರೋವರೆಗೆ ಕಾಯುತ್ತೇವೆಂದು ಕಚೇರಿ ಆವರಣದಲ್ಲೇ ಕೂತರು. ಅದನ್ನು ನೋಡಿದ ಎಸಿ ಸಾಹೇಬರು ಅವರ ಬಳಿ ಬಂದು ಅರ್ಜಿ ನನಗೆ ಕೊಡಿ. ಡಿಸಿಯವರು ಬಂದ ಕೂಡಲೇ ಅವರಿಗೆ ಕೊಡುತ್ತೇನೆ ಅಂತ ವಿನಂತಿ ಮಾಡಿಕೊಂಡ ಮೇಲೆ ಅರ್ಜಿಯನ್ನು ಅವರಿಗೆ ಕೊಟ್ಟರು. ಆದರೆ, ಅಲ್ಲಿಂದ ಬರುವಾಗ ಗೋಮಾಳ ಪರಭಾರೆ ವಿರೋಧಿ ಘೋಷಣೆ ಕೂಗಿದರು! ಅದು ಅಲ್ಲೇ ಇದ್ದ ಪತ್ರಕರ್ತನೊಬ್ಬನ ಕಿವಿಗೆ ಬಿತ್ತು.

ಗೋಮಾಳ ಪರಭಾರೆ ವಿರುದ್ಧ ಕೂಗಿದ ಮೂರೇ ಮೂರು ಘೋಷಣೆಗಳು ಇಷ್ಟು ದೊಡ್ಡ ಪರಿಣಾಮ ಬೀರುತ್ತೆ ಅಂತ ಹೊಸಳ್ಳಿಯವರು ನಿರೀಕ್ಷಿರಲಿಲ್ಲ! ದುರ್ಗದ ಪತ್ರಕರ್ತರೆಲ್ಲ ಚುರುಕಾದರು. ಜಿಲ್ಲೆಯಲ್ಲಿ ಯಾರದೇ ಭೂಮಿ ಕಬಳಿಕೆ ಆದರೂ ಸಂತ್ರಸ್ತರ ಬೆಂಬಲಕ್ಕೆ ಮೊದಲು ಧಾವಿಸುತ್ತಿದ್ದ ಲೋಕಲ್ ಪತ್ರಿಕೆಯೊಂದು ವಿಶೇಷ ವರದಿ ಪ್ರಕಟಿಸಿತು! ಮಠದವರು ಗೋಮಾಳಕ್ಕೆ ಬೇಲಿ ಹಾಕಿದ ಚಿತ್ರವೂ ಪ್ರಕಟವಾಯಿತು. ಅದು ಹೊಸಳ್ಳಿ ಗೋಮಾಳದ ಚಿತ್ರ ಅಲ್ಲ. ಒಂದೆರಡು ಟಿವಿಗಳಲ್ಲಿ ಸುದ್ದಿಯಷ್ಟೇ ಪ್ರಸಾರವಾಯಿತು. ಈ ಎಲ್ಲಾ ವರದಿಗಳನ್ನು ಜಿಲ್ಲೆಯ ಜನಪ್ರತಿನಿಧಿಗಳು ಗಮನಿಸಿದರು.

ಮಠದ ಭಕ್ತರಾದ ಇಬ್ಬರು ಎಂಎಲ್ಲೆಗಳು ದೊಡ್ಡ ಸ್ವಾಮಿಗಳಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಗೋಮಾಳದ ಮತ್ತು ಇಮಾಂ ಸಾಬರ ಜಮೀನನ್ನು ಮಠಕ್ಕೆ ಕೊಡಿ ಅಂತ ನೀವು ಕೇಳಬಾರದಿತ್ತು. ವಿರೋಧ ಪಕ್ಷಗಳು ಇದನ್ನೇ ಇಟ್ಟುಕೊಂಡು ರಾಜಕೀಯ ಮಾಡುತ್ತವೆ. ಸಿಎಂಗೆ ಕೆಟ್ಟ ಹೆಸರು ಬರುತ್ತೆ ಅಂತ ಆತಂಕ ವ್ಯಕ್ತಪಡಿಸಿದರು. ದೊಡ್ಡ ಸ್ವಾಮಿಗಳಿಗೆ ಅರ್ಜಿಯ ವಿಷಯ ಗೊತ್ತೇ ಇರಲಿಲ್ಲ! ಏನು ಅರ್ಜಿ? ಯಾರ ಜಮೀನು? ಅಂತ ಫೋನ್ ಮಾಡಿದವರನ್ನೇ ಕೇಳಿದರು. ನಮ್ಮ ಗಮನಕ್ಕೆ ಬರದೇ ಆಗಿರೊ ಕೆಲಸಕ್ಕೆ ನಾವು ಜವಾಬ್ದಾರರಲ್ಲ ಅಂತ ಸ್ವಾಮಿಗಳು ಹೇಳಿಬಿಟ್ಟರು.

ಮರು ದಿನ ದುರ್ಗದ ಸ್ಥಳೀಯ ಪತ್ರಿಕೆಗಳೂ ಸೇರಿದಂತೆ ಎಲ್ಲವನ್ನೂ ತರಿಸಿಕೊಂಡು ಓದಿದರು. ರಾಜಧಾನಿಯಿಂದ ಪ್ರಕಟವಾಗುವ ಒಂದು ಪತ್ರಿಕೆಯಂತೂ ಕಟುವಾದ ಸಂಪಾದಕೀಯ ಬರೆದಿತ್ತು. ಅದನ್ನು ಓದಿದ ಮೇಲೆ ಅವರಿಗೆ ಮಠದಲ್ಲಿರುವುದು ಬೇಡವೆನ್ನಿಸಿತು. ಸಂಜೆ ಮೂಲ ಮಠಕ್ಕೆ ಹೋಗಿಬಿಟ್ಟರು.

ಪತ್ರಿಕಾ ವರದಿಗಳನ್ನು ಜಿಲ್ಲೆಯ ಬಹಳಷ್ಟು ಜನ ನಂಬಲಿಲ್ಲ. ಮಠದವರು ಸ್ಕೂಲು, ಆಸ್ಪತ್ರೆ ಕಟ್ಟಲು ಭೂಮಿ ಕೊಡಿ ಅಂತ ಕೇಳಿರಬಹುದು. ಅದರಲ್ಲಿ ತಪ್ಪೇನಿದೆ ಅಂತ ಕೆಲವರು ಸಮರ್ಥನೆ ಮಾಡಿದರು.

ದೊಡ್ಡ ಸ್ವಾಮಿಗಳು ಕೋಪ ಮಾಡಿಕೊಂಡು ಮೂಲ ಮಠಕ್ಕೆ ಹೋದರೆಂದು ಸುದ್ದಿ ಆಯಿತು. ಕೆಲ ಗಣ್ಯ ಭಕ್ತರು ಅಲ್ಲಿಗೇ ಹೋಗಿ ಅವರನ್ನು ಭೇಟಿ ಮಾಡಿದರು. 'ನೀವು ಕೋಪ ಮಾಡಿಕೊಂಡು ಇಲ್ಲಿಗೆ ಬಂದು ಕೂತರೆ ನಿಮ್ಮ ಮತ್ತು ಸಣ್ಣ ಸ್ವಾಮಿಗಳ ನಡುವೆ ಭಿನ್ನಾಭಿಪ್ರಾಯ ಇದೆ ಅಂತ ಪ್ರಚಾರ ಆಗುತ್ತೆ. ಮೊದಲು ಪತ್ರಿಕಾ ವರದಿಗಳಿಗೆ ಸ್ಪಷ್ಟೀಕರಣ ಕೊಡಿ...' ಅಂತ ವಿನಂತಿ ಮಾಡಿಕೊಂಡರು. ನಮ್ಮ ಗಮನಕ್ಕೆ ಬಾರದೆ ಈ ಕೆಲಸ ಆಗಿದೆ. ಅದಕ್ಕೆ ನಾವು ಹೊಣೆ ಅಲ್ಲ ಅಂತ ಸ್ವಾಮಿಗಳು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಿದರು.

ಗೋಮಾಳದ ಭೂಮಿ ಕೊಡಿ ಅಂತ ಅರ್ಜಿ ಹಾಕಿದ್ದು ದೊಡ್ಡವರಿಗೆ ಗೊತ್ತೇ ಇರಲಿಲ್ಲವಂತೆ. ಅದು ಸಣ್ಣವರ ತೀರ್ಮಾನವಂತೆ ಅಂತ ಪ್ರಚಾರ ಆಯಿತು. ತಕ್ಷಣ ಪತ್ರಿಕೆಗಳಿಗೆ ಸ್ಪಷ್ಟೀಕರಣ ಕೊಡಿ